## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 3ನೇ ದಿನ ಇಳಿಕೆ

ಮಲೇಶಿಯನ್ ಪಾಮೆಣ್ಣೆ ದರ ಸತತ 3ನೇ ದಿನ 33 ರಿಂಗಿಟ್ಸ್ 0.72 ಶೇಕಡಾ ಇಳಿಕೆಯಾಗಿ 4010 ರಿಂಗಿಟ್ಸ್ ($ 895.09) ಆಗಿದೆ. ಇದು ಫೆಬ್ರವರಿ 16ರ ನಂತರ ಕನಿಷ್ಠ ದರವಾಗಿದೆ. ಮಾರ್ಚ್ 31ರೊಳಗೆ ಭಾರತ 1.5 ಮಿಲಿಯನ್ ಟನ್ ಕರರಹಿತ ಸೂರ್ಯಕಾಂತಿ ಎಣ್ಣೆ ಆಮದು ಮಾಡಬಹುದೆಂದು ಅಂದಾಜಿಸಲಾಗಿದೆ.ಸರಕಾರಿ ಕೋಟಕ್ಕಿಂತ 0.5 ಮಿಲಿಯನ್ ಟನ್ ಕಡಿಮೆ. ಇಂಡೋನೇಶಿಯಾ ಪಾಮೆಣ್ಣೆ ರೆಫರೆನ್ಸ್ $911.41 ಪ್ರತಿ ಟನ್‌ಗೆ ನಿಗದಿಪಡಿಸಲು ಯೋಜಿಸಿದೆಯೆನ್ನಲಾಗಿದೆ. (ಮಾರ್ಚ್ 16–31 ಅವಧಿಗೆ )

## ಬ್ರೆಜಿಲ್‌ನಿಂದ ದಾಖಲೆ 93 MMT ಸೋಯಾಬೀನ್, 50 MMT ಜೋಳ ರಫ್ತು ಸಾಧ್ಯತೆ

2023ರಲ್ಲಿ ಬ್ರೆಜಿಲ್‌ನಿಂದ 93 ಮಿಲಿಯನ್ ಟನ್ ಸೋಯಾಬೀನ್ ಹಾಗೂ 50 ಮಿಲಿಯನ್ ಟನ್ ಜೋಳ ರಫ್ತಾಗುವ ಸಾಧ್ಯತೆಯಿದೆಯೆನ್ನಲಾಗಿದೆ. (ಸರ್ವಕಾಲಿಕ ಹೆಚ್ಚಳ) ದಿನ ವರ್ಷ77.8ಮಿಲಿಯನ್ ಟನ್ ಸೋಯಾಬೀನ್ ಹಾಗೂ 43.1 ಮಿಲಿಯನ್ ಟನ್ ಜೋಳ ರಫ್ತಾಗಿದೆನ್ನಲಾಗಿದೆ. 2023 ಮಾರ್ಚ್‌ನಲ್ಲಿ 14.2 ಮಿಲಿಯನ್ ಟನ್ ಸೋಯಾಬೀನ್ ರಫ್ತಾಗಬಹುದೆಂದು ಅಂದಾಜಿಸಲಾಗಿದ್ದು ಹಿಂದಿನ ವರ್ಷ ಮಾರ್ಚ್‌ನಲ್ಲಿ 12.1 ಮಿಲಿಯನ್ ಟನ್ ಸೋಯಾಬೀನ್ ರಫ್ತಾಗಿದೆನ್ನಲಾಗಿದೆ. ಮಾರ್ಚ್‌ನಲ್ಲಿ ಬ್ರೆಜಿಲ್‌ನಿಂದ 803,219 ಟನ್ ಜೋಳ ರಫ್ತಾಗುವ ಅಂದಾಜಿದ್ದು, ಹಿಂದಿನ ವರ್ಷ ಈ ಅವಧಿಯಲ್ಲಿ 695,987 ಟನ್ ಜೋಳ ರಫ್ತಾಗಿದೆನ್ನಲಾಗಿದೆ.